ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರುಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಅವರೇ ನೇರವಾಗಿ ವಿತರಣೆ ಮಾಡುತ್ತಾರೋ, ಮಾಡಲಿ, ಇಲ್ಲ, ಲಾಟರಿಯ ಮುಖಾಂತರ ಮಾಡುವುದಾದರೆ ಮಾಡಿ, ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ಲಾಟರಿ ಎನ್ನುವ ಪದಕ್ಕೆ ಕನ್ನಡದಲ್ಲಿ ಏನು ಹೇಳಬೇಕು?

ಶ್ರೀ ಎಸ್.ಎಸ್. ಪಾಟೀಲ್ : ಚೀಟಿ ಎತ್ತುವುದು, ಎಂದು ಹೇಳಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಚೀಟಿ ಎತ್ತುವ ಮುಖಾಂತರ ಮಾಡುವುದಾದರೆ ಮಾಡಲಿ, ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ಅವರ ಕೈಗೆ ಅಧಿಕಾರವನ್ನು ಕೊಟ್ಟು ನಾಲ್ಕು ಜನರನ್ನು ನಾಮಿನೇಟ್ ಮಾಡಿ ಬಿಡಿ, ಚೀಟಿ ಏಕೆ ಎತ್ತಬೇಕು? ಸರ್ಕಾರ ಏಕೆ ತಲೆ ಹಾಕಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಚೀಟಿ ಎತ್ತುವಂಥಾದ್ದು, ಚೀಟಿ ವ್ಯವಹಾರವಾಗಬಾರದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಎಸ್.ಎಸ್. ಪಾಟೀಲ್‌ರವರು, ಚೀಟಿ ಎತ್ತುವುದು ಎಂದರೆ, ಏನೆಂಬುದರ ಬಗ್ಗೆ, ವಿವರವಾಗಿ ವಿಚಾರವನ್ನು ಹೇಳಬೇಕು.

ಶ್ರೀ ಹೆಚ್.ಎಸ್. ಪುಟ್ಟರಂಗನಾಥ್ : ಮಾನ್ಯ ಉಪಾಧ್ಯಕ್ಷರೇ, ಮುಳುಗಡೆಯಾದಂತಹ ಪ್ರದೇಶದಲ್ಲಿ, ಸ್ಥಳಾಂತರಗೊಳಿಸಿರುವಂತಹ ಫಲಾನುಭವಿಗಳಿಗೆ, ಮನೆಗಳು ಜಾಸ್ತಿ ಇರುವಂತಹ ಕಡೆಗಳಲ್ಲಿ ಕೊಡುತ್ತೀರಿ, ಎಲ್ಲೆಲ್ಲಿ ಡ್ಯಾಮ್‌ಗಳು ಆಗಿವೆ, ಅಂತಹ ಪ್ರದೇಶಗಳಲ್ಲಿ, ತಾವು ಕೊಡಬೇಕಾಗುತ್ತದೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಚಾರವನ್ನು ನಾನು ಪರಿಶೀಲಿಸುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯ್ತಿಗಳ ವಿದ್ಯುತ್ ಬಿಲ್ ಬಾಕಿ

608 (5285) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯ್ತಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಗ್ರಾಮ ಪಂಚಾಯ್ತಿಗಳು ಬಹಳ ಕಾಲದಿಂದ ವಿದ್ಯುತ್ ಬಿಲ್ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಇ) ವಿದ್ಯುತ್ ಬಿಲ್ ಬಾಕಿ ಮೊತ್ತ ಮತ್ತು ಅದಕ್ಕೆ ವಿಧಿಸಿರುವ ಬಡ್ಡಿ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಈ) ಬಡ್ಡಿ ಮೊತ್ತವೇ ಬಹಳ ಆಗಿರುವುದರಿಂದ ಅಭಿವೃದ್ಧಿಗೆ ಮೀಸಲಾದ ಹಣ ಇದಕ್ಕೆ ಉಪಯೋಗಿಸಿದರೆ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುವುದಿಲ್ಲವೆ

ಉ) ವಿದ್ಯುತ್ ಬಿಲ್ ಬಾಕಿ ಆಗಿ ಬೃಹತ್ ಮೊತ್ತದ ಬಡ್ಡಿಗೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ, ಇಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಂ ಪಂಚಾಯ್ತಿಗಳ ಸಂಖ್ಯೆ 260 (ತಾಲ್ಲೂಕುವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಿದೆ).

ಆ) ಬಂದಿದೆ.

ಇ) ಕೆ.ಪಿ.ಟಿ.ಸಿ.ಎಲ್. ತಿಳಿಸಿರುವಂತೆ ದಿನಾಂಕ 31.3.2003 ರಲ್ಲಿದ್ದಂತೆ ಒಟ್ಟು ವಿದ್ಯುತ್ ಬಿಲ್ಲಿನ ಬಾಕಿ, ಅಸಲು ರೂ. 493.92 ಲಕ್ಷಗಳು ಮತ್ತು ಬಡ್ಡಿ ರೂ. 82.13 ಲಕ್ಷ ಇರುತ್ತದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಿದೆ. ಆದಾಗ್ಯೂ ಈ ಅಂಕಿಅಂಶಗಳನ್ನು ಗ್ರಾಮ ಪಂಚಾಯಿತಿವಾರು ಮರುಹೊಂದಾಣಿಕೆ ಮಾಡಲಾಗುತ್ತಿದೆ.

ಈ) ಹೌದು. ಆದಾಗ್ಯೂ ಬಡ್ಡಿ ಹಣದ ಬಗ್ಗೆ ಮರು ಹೊಂದಾಣಿಕೆ ಮಾಡಲಾಗುತ್ತಿದೆ.

ಉ) ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯು ನೀಡಿರುವ ಶಿವಮೊಗ್ಗ ಜಿಲ್ಲೆಯ ಗ್ರಾಮಪಂಚಾಯಿತಿಗಳ ವಿದ್ಯುತ್ ಬಿಲ್ಲುಗಳಲ್ಲಿ ಹಲವಾರು ನ್ಯೂನತೆಗಳು ಕಂಡುಬಂದಿದ್ದು, ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ. ಈ ನ್ಯೂನತೆಗಳ ಬಗ್ಗೆ ಮರು ಹೊಂದಾಣಿಕೆ ಮಾಡಲಾಗುತ್ತಿದೆ. ಆದ್ದರಿಂದ ಗ್ರಾಮ ಪಂಚಾಯಿತಿ ನೌಕರರ ಮೇಲೆ ಕ್ರಮತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ–1

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ಗ್ರಾಮ ಪಂಚಾಯತಿಗಳ ಸಂಖ್ಯೆ ಹಾಗೂ ವಿದ್ಯುತ್ ಬಿಲ್ ಬಾಕಿಯ ವಿವರ

ಕ್ರ. ಸಂ.	ತಾಲ್ಲೂಕಿನ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ವಿದ್ಯುತ್ ಬಿಲ್ ಬಾಕಿ ವಿವರ (31.3.2003 ರಲ್ಲಿ ಇದ್ದಂತೆ) (ರೂ. ಲಕ್ಷಗಳಲ್ಲಿ)		
			ಅಸಲು	ಬಡ್ಡಿ	ಒಟ್ಟು
1	ಶಿವಮೊಗ್ಗ	37	86.01	25.26	111.27
2	ಭದ್ರಾವತಿ	39	138.95	11.89	150.84
3	ತೀರ್ಥಹಳ್ಳಿ	38	26.15	1.00	27.15
4	ಸಾಗರ	35	49.00	6.26	55.26
5	ಸೊರಬ	39	74.76	16.62	91.38
6	ಶಿಕಾರಿಪುರ	43	97.13	16.96	114.09
7	ಹೊಸನಗರ	29	21.22	4.14	25.36
	ಒಟ್ಟು	260	493.22	82.13	575.35

ಅನುಬಂಧ–2

ಶಿವಮೊಗ್ಗ ಜಿಲ್ಲೆಯಲ್ಲಿ ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯು ನೀಡಿರುವ ಗ್ರಾಮ ಪಂಚಾಯಿತಿಗಳ ವಿದ್ಯುಚ್ಛಕ್ತಿ ಬಿಲ್ಲುಗಳಲ್ಲಿ ಕಂಡು ಬಂದಿರುವ ನ್ಯೂನತೆಗಳು

1) ಶಿವಮೊಗ್ಗ ಜಿಲ್ಲೆಯಲ್ಲಿ 260 ಗ್ರಾಮ ಪಂಚಾಯತಿಗಳು ಇದ್ದು ಕೆಪಿಟಿಸಿಎಲ್ ಸಂಸ್ಥೆಯು 264 ಗ್ರಾಮ ಪಂಚಾಯತಿಗಳಿಗೆ ಬಿಲ್ಲುಗಳನ್ನು ನೀಡಿದ್ದು 4 ಗ್ರಾಂ ಪಂಚಾಯತಿಗಳ ಸಂಖ್ಯೆ ಹೆಚ್ಚಾಗಿರುತ್ತದೆ.

2) ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬೀದಿದೀಪಗಳಿಗೆ ಮೀಟರ್‌ಗಳನ್ನು ಅಳವಡಿಸಿರುವುದಿಲ್ಲ. ಆದಾಗ್ಯೂ ದಿನಕ್ಕೆ 8 ಗಂಟೆ ವಿದ್ಯುತ್ ಪೂರೈಕೆ ಮಾಡಿರುವ ಆಧಾರದ ಮೇಲೆ ಬಿಲ್ಲುಗಳನ್ನು ಸಿದ್ಧಪಡಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಬೀದಿ ದೀಪಗಳಿಗೆ ವಿದ್ಯುತ್ ಪೂರೈಕೆ ಮಾಡಿರುವ ಸಮಯ ಕಡಿಮೆ ಇರುತ್ತದೆ. ಬೀದಿ ದೀಪಗಳಿಗೆ ಮೀಟರ್‌ಗಳನ್ನು ಅಳವಡಿಸುವುದರಿಂದ ವಿದ್ಯುತ್ ಬಿಲ್ಲಿನ ಮೊತ್ತ ಗಣನೀಯವಾಗಿ ಕಡಿಮೆಯಾಗುತ್ತದೆ.

3) ಕಾರ್ಯನಿರ್ವಹಿಸದೇ ಇರುವಂತಹ ವಿದ್ಯುತ್ ಚಾಲಿತ ಕೊಳವೆ ಬಾವಿಗಳಿಗೂ ಸಹ ಬಿಲ್ಲುಗಳನ್ನು ನೀಡಿರುವುದು.

4) ಕೆಪಿಟಿಸಿಎಲ್ ಸಂಸ್ಥೆಯು ಕೆಲವೊಂದು ಗ್ರಾಮ ಪಂಚಾಯಿತಿಗಳಿಗೆ ಅತಿ ಹೆಚ್ಚಿನ ಮೊತ್ತದ ಬಿಲ್ಲುಗಳನ್ನು ನೀಡಿದ್ದು, ಕೆಲವೊಂದು ಗ್ರಾಮ ಪಂಚಾಯತಿಗಳಿಗೆ ಅತಿ ಕಡಿಮೆ ಮೊತ್ತದ ಬಿಲ್ಲುಗಳನ್ನು ನೀಡಿರುತ್ತದೆ. ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ರೂ. 6.00 ಲಕ್ಷಕ್ಕಿಂತಲೂ ಹೆಚ್ಚಿನ ಮೊತ್ತದ ಬಿಲ್ ನೀಡಿರುವಂತಹ ಗ್ರಾಮ ಪಂಚಾಯತಿಗಳು	ಬಿಲ್ ಮೊತ್ತ	ರೂ. 20,000.00 ಗಳಿಗಿಂತಲೂ ಕಡಿಮೆ ಮೊತ್ತದ ಬಿಲ್ಲು ನೀಡಿರುವಂತಹ ಗ್ರಾಮ ಪಂಚಾಯತಿಗಳು	ಬಿಲ್ ಮೊತ್ತ
1	ಅನವಟ್ಟಿ	13,31,254.00	ಹೆಗ್ಗೋಡು	17,410.00
2	ಹೊಳೆಹೊನ್ನೂರು	9,83,154.00	ಅರೇಹಳ್ಳಿ	12,192.00
3	ಕುಂಸಿ,	9,70,740.00	ಬಾನುಕುಳಿ	17,473.00
4	ಹರಮಘಟ್ಟ	18,66,043.00	ನಾಲ್ಲೂರು ಕೋಳಿಗೆ	11,692.00
5	ಅರೇಬಿಳಚಿ	10,30,963.00	ಅರಳಿ ಸಾಂಬ್ರಾಳಿ	3,453.00
6	ಅಯನೂರು	7,89,860.00		
7	ಮೇಲಿನಹಣಸವಾಡಿ	8,16,143.00		

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಗ್ರಾಮ ಪಂಚಾಯತ್‌ಗಳು, "ಮೆಸ್‌ಕಾಮ್"ಗೆ ಕಟ್ಟತಕ್ಕಂತಹ ಬಿಲ್ ಎಷ್ಟು ಬಾಕಿ ಇವೆಯೆಂದು ಕೇಳಿದ್ದೇನೆ, ಈಗ ನಾನು ವಿದ್ಯುತ್ ಇಲಾಖೆಗೆ ಕಟ್ಟತಕ್ಕಂಥ ಅಸಲು ಮತ್ತು ಬಡ್ಡಿ ಎಷ್ಟು ಬಾಕಿ ಇದೆಯೆಂದು ಕೇಳಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಗ್ರಾಮ ಪಂಚಾಯತ್‌ಗಳು 260, 493 ಲಕ್ಷ ರೂಪಾಯಿಗಳ ಅಸಲು, ಮತ್ತು ಬಡ್ಡಿ 82 ಲಕ್ಷ ರೂಪಾಯಿಗಳ ಬಾಕಿ ಇದೆಯೆಂದು, ಸರ್ಕಾರ ನನಗೆ ಉತ್ತರವನ್ನು ಕೊಟ್ಟಿದೆ. ನಾನು ಕೇಳುವುದೆಂದರೆ, ಈ ಬಡ್ಡಿ ಹಣ ಏಕೆ ಬಾಕಿಯಾಗಿ ಇದೆ, ಈ ಹಣವನ್ನು ಕಟ್ಟುವವರು ಯಾರು? ಈ ಬಡ್ಡಿ ಬೀಳುವಂಥಾದ್ದಕ್ಕೆ ಜವಾಬ್ದಾರರು ಯಾರು? ನೀವು ಸಮಯಕ್ಕೆ ಹಣವನ್ನು ಕಟ್ಟುವಂಥಾದ್ದಕ್ಕೆ ಈ ಗ್ರಾಮಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಿಲ್ಲವೇ?

ನಿರ್ದಿಷ್ಟವಾದಂತಹ ಅವಧಿಯಲ್ಲಿ ಹಣವನ್ನು ಕಟ್ಟುವುದಕ್ಕೆ ಏಕೆ ಸಾಧ್ಯವಾಗಲಿಲ್ಲ? ಈಗ ಈ 82 ಲಕ್ಷ ರೂಪಾಯಿಗಳ ಬಡ್ಡಿ ಹಣ ಏನು ಗ್ರಾಮ ಪಂಚಾಯತ್‌ಗಳಿಗೆ ಬಿದ್ದಿದೆ, ಇದು ಅಭಿವೃದ್ಧಿಗೋಸ್ಕರ ಇಟ್ಟಿರುವಂತಹ ಹಣವನ್ನು ಬಡ್ಡಿಗೆ ಎಂದು ಕಟ್ಟಿಬಿದ್ದರೆ ಹಳ್ಳಿಗಳ ಅಭಿವೃದ್ಧಿ ಏನು ಆಗುತ್ತದೆ? ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಉಪಾಧ್ಯಕ್ಷರೇ, ಈ ಅಂಕಿಸಂಖ್ಯೆಗಳನ್ನು ಕೆ.ಪಿ.ಟಿ.ಸಿ.ಎಲ್.ನವರು ಕೊಟ್ಟಿರುವಂಥಾದ್ದು, ಇದನ್ನು ನಮ್ಮ ಇಲಾಖೆಯವರು ಸಂಪೂರ್ಣವಾಗಿ ಒಪ್ಪಿಲ್ಲ, ಇವರು ಬಡ್ಡಿ ಎಷ್ಟು ಕೊಡಬೇಕು, ಅಸಲು ಎಷ್ಟು ಹಣ ಕೊಡಬೇಕೆಂಬುದನ್ನು ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯವರು ಕ್ಲೇಮ್ ಮಾಡಿರುಂಥಾದ್ದು. ಹೆಚ್ಚು ಕಡಿಮೆ ಇರುವುದಕ್ಕೆ ಸಾಧ್ಯವೆಂದು ನನಗೂ ಅನ್ನಿಸುತ್ತದೆ. ಈ ಪ್ರಶ್ನೆಯನ್ನು ಇವತ್ತು ಸಚಿವಸಂಪುಟದಲ್ಲೂ ಕೂಡ ನಾನು ಎತ್ತಿದೆ, ಇದನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದು ಬಹಳ ತಿಂಗಳು ಹಾಗೂ ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಅಧಿಕಾರಸ್ಥರು ಉನ್ನತಮಟ್ಟದ ಸಮಿತಿಯನ್ನು ಇವತ್ತು ರಚನೆ ಮಾಡಿದ್ದಾರೆ, ಡೆವಲಪ್‌ಮೆಂಟ್ ಕಮಿಷನರ್ ಅಧ್ಯಕ್ಷತೆಯಲ್ಲಿ, ಹಣಕಾಸು ಇಲಾಖೆ ಕಾರ್ಯದರ್ಶಿ ಹಾಗೂ ಆರ್‌ಡಿಪಿಎಆರ್ ಕಾರ್ಯದರ್ಶಿ ಅದರಲ್ಲಿದ್ದು, ಈ ಸಮಿತಿಯು ಮೂರು ತಿಂಗಳಲ್ಲಿ ರಿಕನ್ಸೀಲಿಯೇಷನ್ ಮಾಡಬೇಕು. ರಿಕನ್ಸೀಲಿಯೇಷನ್ ಮಾಡಿದರೆ, ಏನು ಕೆಪಿಟಿಸಿಎಲ್‌ನವರು ತೋರಿಸುತ್ತಾ ಬಂದಿದ್ದಾರೆ, ಅಷ್ಟು ಇರುವುದಿಲ್ಲವೆಂದು ನನಗೂ ಅನ್ನಿಸುತ್ತದೆ. ಏಕೆಂದರೆ ಅದರಲ್ಲಿ ಸಾಕಷ್ಟು ತಪ್ಪುಗಳು ಬಂದಿರುವುದಕ್ಕೆ ಸಾಧ್ಯ. ಡಬಲ್ ಬಿಲ್ಲಿಂಗ್ ಆಗಿರಬಹುದು ಅಥವಾ 8 ಗಂಟೆ ವಿದ್ಯುತ್ ಕೊಡುತ್ತೇವೆನ್ನುವ ಕಲ್ಪನೆಯ ಮೇಲೆ ಲೆಕ್ಕ ಮಾಡಿರಬಹುದು. ಮೀಟರಿಂಗ್ ಅಂತೂ ಮಾಡಿಲ್ಲ. ಅದನ್ನು ಮಾಡಬೇಕಾಗುತ್ತದೆ. ಸರಿಯಾದ-ಅಂಕಿಅಂಶಗಳು ಸಿಗಬೇಕಾದರೆ ಈಗೇನು ಕಂಪನಿಗಳೇನು ಮಾಡಿದ್ದೇವೆ ಅವರ ಸಹಾಯದಿಂದ ಮೀಟರಿಂಗ್ ಮಾಡಬೇಕಾಗುತ್ತದೆ. ಇದನ್ನು ಮಾಡಿದರೆ ಇನ್ನು ಮುಂದೆ ಎಷ್ಟು ವಿದ್ಯುತ್ ಕುಡಿಯುವ ನೀರಿಗೆ, ಬೀದಿ ದೀಪಕ್ಕೆ ಎಷ್ಟು ಉಪಯೋಗವಾಯಿತೆನ್ನುವ ಸ್ಪಷ್ಟವಾದ ವಿವರ ನಮಗೆ ಸಿಗುವುದಕ್ಕೆ ಸಾಧ್ಯ. ನನ್ನ ಹತ್ತಿರ ವಿವರ ಇವತ್ತು ಇಲ್ಲ. ಆದರೂ ಕೂಡ ಇದರಿಂದ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಅಡ್ಡಿ ಬರುತ್ತಿಲ್ಲ. ನಾವು ಆಗಲೇ ವಿದ್ಯುತ್ ಬಿಲ್ ಕೊಡುವಾಗ ಇದನ್ನು reconcile ಮಾಡಿ ಕೊಡಿ ಅದಕ್ಕಿಂತ ಮುಂಚೆ ಕೊಡುವ ಅವಶ್ಯಕತೆ ಇಲ್ಲವೆಂದು ಹೇಳಿದ್ದೇವೆ. ಅದನ್ನು ನಿಮ್ಮ ಹಣದಿಂದ ಕೊಡಿ, ಅಭಿವೃದ್ಧಿಗೆ ಕೊಟ್ಟಿರುವ ಹಣದಿಂದ ಕೊಡುವುದಲ್ಲವೆಂದು ಹೇಳಲಾಗಿದೆ. ಈ ಸಮಸ್ಯೆ ಇರುವುದರಿಂದ ಇವತ್ತು ಸಪ್ಲಿಮೆಂಟರಿ ಡಿಮಾಂಡ್ಸ್‌ನಲ್ಲಿ ನೂರುಕೋಟಿ ರೂ. ಕೊಡುವುದರಿಂದ ಅರಿಯರ್ಸ್ ಪ್ರಶ್ನೆ ಸದ್ಯಕ್ಕಂತೂ ಇರುವುದಿಲ್ಲ, ಮುಂದೆಯೂ ಕೂಡ ಬರದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ನನ್ನ ಅನಿಸಿಕೆ ಏನೆಂದರೆ, ಇದು ಇಡೀ ರಾಜ್ಯದಲ್ಲಿದೆ, ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಮಾತ್ರ ನಾನು ಹೇಳುತ್ತೇನೆ, 82 ಲಕ್ಷ ರೂ. ಬಡ್ಡಿ ಬಾಕಿ ಇದೆ, ಬಹುಶಃ ಮಾರ್ಚ್‌ಯಿಂದ ಇಲ್ಲಿಯವರೆಗೆ ಮಾನ್ಯ ಮಂತ್ರಿಗಳು ಹೇಳಿದಂತೆ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚನೆಯಾಗಿದೆ ಅವರು ಮೂರುತಿಂಗಳಲ್ಲಿ ವರದಿಯನ್ನು ಕೊಡುವವರಿದ್ದಾರೆ, ಅಲ್ಲಿಗೆ ಬಹುಶಃ ಒಂದೂವರೆ ಕೋಟಿ ರೂ.ಗಳ ಬಡ್ಡಿಯಾಗಬಹುದು. ನಾನು ಮಾನ್ಯ ಸಚಿವರಲ್ಲಿ

ಕೇಳುವುದೇನೆಂದರೆ, ಈ ಬಡ್ಡಿಯನ್ನು ನೀವು ರಿಕನ್ಸಿಲೇಷನ್ ಮಾಡುವವರೆಗೆ ಮನ್ನಾ ಮಾಡುತ್ತೀರಾ? ಅಸಲು ಕಟ್ಟಿದರೆ ಸಾಕು ಎಂದು ಹೇಳುತ್ತೀರಾ? ಇಲ್ಲದೆ ಹೋದರೆ, ಒಂದು ಬಡ್ಡಿ ಮನ್ನ ಮಾಡಬೇಕು, ಇಲ್ಲದೆ ಹೋದರೆ ಸಮಯಕ್ಕೆ ಸರಿಯಾಗಿ ರಿಕನ್ಸಿಲೇಷನ್ ಮಾಡಿಸಿಕೊಂಡು ಹಣ ಪಾವತಿ ಮಾಡದಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಸರ್ಕಾರ, ಮೋರಿ ಕಟ್ಟುವುದಕ್ಕೆ, ಪಂಚಾಯಿತಿ ಹಳ್ಳಿಗಳ ರಸ್ತೆ ಮಾಡುವುದಕ್ಕೆ, ಕುಡಿಯುವ ನೀರನ್ನು ಒದಗಿಸುವುದಕ್ಕೆ ಕೊಟ್ಟಂತಹ ಹಣವನ್ನು ಪೂರ್ತಿ ಕೆಪಿಟಿಸಿಎಲ್‌ಗೆ ತುಂಬಿ ಅವರು ಕೈಎತ್ತಿಕೊಂಡು ಕುಳಿತುಕೊಂಡರೆ ನಮ್ಮ ಹಳ್ಳಿಗಳು ಉದ್ಧಾರವಾಗುವುದಿಲ್ಲ ಸ್ವಾಮಿ. ಒಂದೊಂದು ಪಂಚಾಯಿತಿಗಳಿಗೆ ಎಷ್ಟೆಷ್ಟು ಬಡ್ಡಿ ಬರುತ್ತಿದೆ? ಆದುದರಿಂದ ರಿಕನ್ಸಿಲೇಷನ್ ಆಗುವತನಕ ಬಡ್ಡಿಯನ್ನು ಸರ್ಕಾರದ ವತಿಯಿಂದ ಮನ್ನ ಮಾಡುತ್ತೀರಾ? ಇಲ್ಲದ ಹೋದರೆ ಅದನ್ನು ಸರ್ಕಾರ ತುಂಬಿ ಕೊಡುತ್ತದೆಯೇ? ನಮ್ಮ ಪಂಚಾಯಿತಿಗಳಿಗೆ ಹೊರೆಯಾಗಬಾರದು.

ಶ್ರೀ ಎಂ.ವೈ. ಘೋರ್ಪಡೆ : ರಿಕನ್ಸಿಲೇಷನ್ ಮಾಡಿಯೇ ನಾವು ಹಣವನ್ನು ತುಂಬುತ್ತೇವೆ, ಅದರಲ್ಲಿ ಅನುಮಾನವಿರುವುದರಿಂದ ನಾವು ರಿಕನ್ಸಿಲೇಷನ್ ಮಾಡುವುದಕ್ಕೆ ಹೊರಟಿದ್ದೇವೆ, ಅಲ್ಲಿಯವರೆಗೆ ಗ್ರಾಮಪಂಚಾಯಿತಿಗೆ ಏನೂ ತೊಂದರೆ ಮಾಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಎಷ್ಟೆಷ್ಟು ಅಸಲು ಬಾಕಿ ಇದೆ ಎನ್ನುವುದನ್ನು ತೆಗೆದು ನೋಡಿ ಇವರ ಇಲಾಖೆಯ ಅಧಿಕಾರಿಗಳು ಆಗಾಗ ರಿವಿವ್ಯೂ ಮಾಡಬೇಕಾಗಿತ್ತು, ಒಂದೊಂದು ತಾಲ್ಲೂಕಿನದ್ದು ಎಷ್ಟೆಷ್ಟು ಎನ್ನುವುದನ್ನು ನೋಡಿ, ಭದ್ರಾವತಿ ತಾಲ್ಲೂಕಿನವರು 1,38,95,000 ರೂ. ಬಾಕಿ ಕಟ್ಟುವುದು ಅಸಲು ಇದೆ. 11,89,000 ರೂ. ಬಡ್ಡಿ ಬಿದ್ದಿದೆ, ಸಮಯಕ್ಕೆ ಸರಿಯಾಗಿ ಕಟ್ಟುವುದಕ್ಕೆ ಏಕೆ ಆಗುವುದಿಲ್ಲ? ಅದನ್ನು ಕಟ್ಟಿಸುವಂತೆ ಮಾಡುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಹಾಗಾದರೆ ಪಂಚಾಯಿತಿಗೆ ಹೇಳುವವರು ಕೇಳುವವರು ಇಲ್ಲ, ಕೊಟ್ಟ ಹಣ ಅಭಿವೃದ್ಧಿಗೆ ಹೋಗುವುದಿಲ್ಲವೆಂದಾದರೆ ಯಾರು ನೋಡಿಕೊಳ್ಳಬೇಕು? ಅದಕ್ಕೆ ನಾನು ಹೇಳುವುದು, ಸಮಯಕ್ಕೆ ಸರಿಯಾಗಿ ಕಟ್ಟದಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ನಾನು ಪ್ರಶ್ನೆ ಕೇಳಿದರೆ, ಅಂತಹ ಅಂಭವ ಬರುವುದಿಲ್ಲ, ಗ್ರಾಮ ಪಂಚಾಯಿತಿ ವಿದ್ಯುತ್ ಬಿಲ್‌ಗಳಲ್ಲಿ ಹಲವಾರು ನ್ಯೂನತೆಗಳು ಕಂಡು ಬಂದಿದ್ದು ಅದನ್ನು ಸರಿಪಡಿಸಲು ಗಮನ ಹರಿಸುತ್ತೇವೆ, ಈಗ ಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ಉತ್ತರ ಕೊಡುತ್ತಾರೆ. ಸಮಯಕ್ಕೆ ಸರಿಯಾಗಿ ಕಟ್ಟದಿರುವ ಅಧಿಕಾರಗಳ ಮೇಲೆ ಅವರು ಕ್ರಮ ತೆಗೆದುಕೊಳ್ಳುವುದಿಲ್ಲವಂತೆ.

ಶ್ರೀ ಎಂ.ವೈ. ಘೋರ್ಪಡೆ : ತಾವು ಹೇಳುವಂತೆ ಏನೂ ರೆಮಿಟೆನ್ಸ್ ಮಾಡಿಲ್ಲವೆಂದಿಲ್ಲ ಸ್ವಲ್ಪ ರೆಮಿಟೆನ್ಸ್ ಮಾಡುತ್ತಿದ್ದೇವೆ ಆದರೂ ಕೂಡ ಅರಿಯರ್ಸ್ ಇದೆ ಎಂದು ಕೆಪಿಟಿಸಿಎಲ್‌ನವರು ತಿಳಿಸಿದ್ದಾರೆ. ನನಗೇನು ಅನುಮಾನವೆಂದರೆ ಈ ಕೆಪಿಟಿಸಿಎಲ್‌ನವರು ಏನು ಡಿಮಾಂಡ್ ಮಾಡಿದ್ದಾರೆ ಅದರಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತಿದೆ. ಶಿವಮೊಗ್ಗ ತಾಲ್ಲೂಕಿನ 7 ಗ್ರಾಂಪಂಚಾಯಿತಿಗಳಲ್ಲಿ 13, ರೂ 9 ಲಕ್ಷ ರೂ, 18 ಲಕ್ಷ ರೂ, 10 ಲಕ್ಷ ರೂ, 7 ಲಕ್ಷ ರೂ, 8 ಲಕ್ಷ ರೂ ಎಂದಿದೆ ಆದರೆ ಇನ್ನು 6 ಗ್ರಾಮಪಂಚಾಯಿತಿಗಳಲ್ಲಿ ಕೆಲವೇ ಸಾವಿರ ರೂಪಾಯಿಗಳ ಡಿಮಾಂಡ್ ಇದೆ ಇಷ್ಟೊಂದು ವ್ಯತ್ಯಾಸ ಗ್ರಾಮ ಪಂಚಾಯಿತಿಗಳಲ್ಲಿರುವುದು ನನಗೆ ಸ್ವಲ್ಪ ಆಶ್ಚರ್ಯವನ್ನುಂಟು ಮಾಡಿದೆ.

ಶ್ರೀ ಎಸ್.ಎಸ್. ಪಾಟೀಲ್ : ಕೆಲವು ಗ್ರಾಮಪಂಚಾಯಿತಿಗಳು ಕಟ್ಟುತ್ತಾ ಹೋಗಿದ್ದಾರೆ, ಅವರದು ಇಲ್ಲ, ಕೆಲವರು ಕಟ್ಟೇ ಇಲ್ಲ. ತಾವು ತರಿಸಿ ನೋಡಿ ಕೆಲವು ಪಂಚಾಯಿತಿಯವರು ಕಟ್ಟುವುದಕ್ಕೆ ಹೋಗಲಿಲ್ಲ. ಅವರು ಯಾವುದಕ್ಕೂ ಖರ್ಚು ಮಾಡಿದರು, ಇವರು ಕಟ್ಟುತ್ತಾ ಬಂದಿದ್ದಾರೆ ಇವರಿಗೆ ಕಡಿಮೆಯಾಗಿದೆ.

ಶ್ರೀ ಎಂ.ವೈ. ಘೋರ್ಪಡೆ : ಅದನ್ನು ಸ್ವಲ್ಪ ನೋಡಿಸಿ ಎಷ್ಟು ಕಟ್ಟಬೇಕೋ ಅದನ್ನು ಕಟ್ಟಿಸುತ್ತೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ತೊಂದರೆ ಏನಾಗಿದೆ ಎಂದರೆ ಅನೇಕ ಪಂಚಾಯಿತಿಗಳಲ್ಲಿ ಲೈಡನ್ನೇ ಹಾಕಿಲ್ಲ, ಅವಕ್ಕೆ ಕಡಿಮೆ ಬರುತ್ತದೆ, ಲೈಡ್ ಉರಿಸುವುದಕ್ಕೆ ಬಿಲ್ ಜಾಸ್ತಿ ಬರುತ್ತದೆ, ಹಾಗಾಗಿ ವ್ಯತ್ಯಾಸ ಏರುಪೇರಾಗಿದೆಯೇ ಹೊರತು ಅಲ್ಲಿರತಕ್ಕಂಥ ಅಧಿಕಾರಿಗಳು ಬಿಲ್ ಅನ್ನು ಕಟ್ಟಿಸದಿರುವುದು ಅಂತಹವರು ಯಾರಿದ್ದಾರೆ ಅವರ ಮೇಲೆ ನೇರವಾದ ಕ್ರಮ ಜರುಗಿಸಬೇಕೆಂದು ನನ್ನ ಆಗ್ರಹ.

ಶಿವಮೊಗ್ಗ ನಗರದಲ್ಲಿ ಹಮ್ಮಿಕೊಳ್ಳಲಾಗಿರುವ ಗೃಹ ಮಂಡಳಿ ಯೋಜನೆ

609 (5143) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ 2001 ರಿಂದ ಈವರೆವಿಗೂ ಹಮ್ಮಿಕೊಂಡಿರುವ ಗೃಹ ಮಂಡಳಿಯ ವಸತಿ ಯೋಜನೆ ಯಾವುವು. ಈ ಯೋಜನೆಯಡಿಯಲ್ಲಿ ರಚಿಸಲಾಗಿರುವ ಮನೆ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು (ವಿವರ ನೀಡುವುದು)?

ಆ) ಈ ಯೋಜನೆಗಳ ಅಂದಾಜು ವೆಚ್ಚ ಎಷ್ಟು; ಮೇಲ್ಕಂಡ ಅವಧಿಯಲ್ಲಿ ಮಂಡಳಿ ವತಿಯಿಂದ ಶಿವಮೊಗ್ಗ ನಗರದಲ್ಲಿ ಹಮ್ಮಿಕೊಂಡ ಅಭಿವೃದ್ಧಿ ವಿವರ ನೀಡುವುದು?

ಇ) ಕರ್ನಾಟಕ ಗೃಹ ಮಂಡಳಿ ವತಿಯಿಂದ ರಚಿಸಲಾಗಿರುವ ವಸತಿ ಬಡಾವಣೆಯಲ್ಲಿ ಖಾಲಿ ಇರುವ ಉದ್ಯಾನವನಕ್ಕೆ ಮೀಸಲಾಗಿರುವ ಬಯಲು ಪ್ರದೇಶದಲ್ಲಿ ಪಾರ್ಕ್ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೆ: (ವಿವರ ನೀಡುವುದು)

ಈ) ಖಾಲಿ ಇರುವ ಸಿ.ಎ. ನಿವೇಶನಗಳೆಷ್ಟು ಪೌರ ಸೌಲಭ್ಯಕ್ಕೆ (ಸಿ.ಎ) ಮೀಸಲಾಗಿಸಿರುವ ನಿವೇಶನಗಳನ್ನು ಮಂಜೂರು ಮಾಡಿರುವ ವಿವರ ನೀಡುವುದು;

ಉ) ಮಂಡಳಿಯ ಲ್ಯಾಂಡ್ ಬ್ಯಾಂಕ್ ಯೋಜನೆಯಡಿಯಲ್ಲಿ ಖಾಲಿ ಇರುವ ನಿವೇಶನಗಳ ವಿವರಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) 2001 ರಿಂದ ಈವರೆಗೆ ಮಂಡಳಿಯು ಶಿವಮೊಗ್ಗ ನಗರ ವ್ಯಾಪ್ತಿಯ ಗೋಪಿಶೆಟ್ಟಿಕೊಪ್ಪದಲ್ಲಿ 1 ಯೋಜನೆಯನ್ನು 100 ವಸತಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ನಿರ್ಮಿಸುತ್ತಿರುವ ಮನೆಗಳು ಮತ್ತು ರಚಿಸಲಾಗುತ್ತಿರುವ ನಿವೇಶನಗಳ ವಿವರ ಕೆಳಕಂಡಂತಿದೆ: